**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *16.04.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದಃ</u>**

. ಘಟನೆ ಕಾಲಕ್ಕೆ ನಾನು ಮನೆಯಲ್ಲಿ ಇದುದ್ದರಿಂದ ನನಗೆ ಘಟನೆ ಸಮಯ ಗೊತ್ತಾಗಿತ್ತು. ಘಟನೆ ಕಾಲಕ್ಕೆ ನನ್ನ ಮನೆಯಲ್ಲಿ ನಾನು, ನನ್ನ ತಂದೆ, ನನ್ನ ತಾಯಿ ಇದ್ದೆವು. ನಾನು ಕೋರ್ಟ್ ಗೆ ಬಂದಾಗ ಪೊಲೀಸರ ಬಳಿ ಮಾತನಾಡುತ್ತಿದ್ದೆ ಎಂದರೆ ನಿಜ. ಪೊಲೀಸರು ಯಾವ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಬೇರೆ ಬೇರೆ ಹಲವಾರು ಪ್ರಕರಣಗಳಲ್ಲಿ ಸಾಕ್ಷಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಬಾತ್ಮಿದಾರನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಊರಲ್ಲಿ ಶ್ರೀಮಂತನಾಗಿದ್ದೇನೆ ಎಂದರೆ ತಕ್ಕ ಮಟ್ಟಿಗೆ ಇದ್ದೇನೆ. ಸಂಜಯ್, ದೊರೆಸ್ವಾಮಿ ಮತ್ತು ಅಮೃತ್ ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ದೂರಿನಲ್ಲಿ ಮಾಸ್ಕ್ ಯಾವ ಬಣ್ಣದ್ದು ಎಂದು ನಮೂದು ಇದೆ. ಆ ಬಗ್ಗೆ ದೂರಿನಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧದ ಇನ್ನೊಂದು ಪ್ರಕರಣದಲ್ಲಿ ನಾನು ಪ್ರತ್ಯಕ್ಷ ಸಾಕ್ಷಿದಾರನಲ್ಲ ಎಂದರೆ ನಿಜ. ಈ ಪ್ರಕರಣದ ಘಟನೆಗಿಂತ ಮೊದಲು ನನಗೆ ಸಾಕ್ಷಿ ಹೇಳಲು ಕೋರ್ಟ್ ನೋಟಿಸ್ ಬಂದಿತ್ತು. ಆ ಕೇಸ್ ನಲ್ಲಿ ನಾನು ಕೋರ್ಟ್ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆ ನೋಟಿಸ್ ನ ಪ್ರತಿಯನ್ನು ನನಗೆ ಕೊಟ್ಟಿದ್ದಾರೆ. ಆ ನೋಟಿಸ್ ನ ಪ್ರತಿಯನ್ನು ಈ ಪ್ರಕರಣದ ಪಿರ್ಯಾದಿನೊಂದಿಗೆ ಹಾಜರುಪಡಿಸಿಲ್ಲ. ಆ ಇನ್ನೊಂದು ಕೇಸ್ ನಲ್ಲಿ ಆರೋಪಿ ವಿನಯ್ ನಿಗೆ ಚುಚ್ಚಿದ್ದಾನೆ ಎಂದು ಗೊತ್ತಾಗಿ ನಾನು ಅವರ ಅಣ್ಣನ ಕಾರಿನಲ್ಲಿ ಆಸ್ಪತ್ರೆಗೆ ಸೇರಿಸಿದ ಬಗ್ಗೆ ಸಾಕ್ಷಿ ಹೇಳಿದ್ದೇನೆ. ಆ ಪ್ರಕರಣದಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ಕೇಸ್ ನಲ್ಲಿ ಆರೋಪಿ ಮೈನರ್ ಆಗಿದ್ದರಿಂದ ಶಿಕ್ಷೆ ಆಗುವುದಿಲ್ಲ ಎನ್ನುವ ಕಾರಣಕ್ಕೆ ಈ ಪ್ರಕರಣವನ್ನು

ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನನಗೆ ಡ್ರ್ಯಾಗರ್ ನಿಂದ ಚುಚ್ಚಿದಾಗ ನನ್ನಿಂದ ಒಂದು ಅಡಿ ದೂರದಲ್ಲಿ ನಿಂತಿದ್ದ. ಡ್ರ್ಯಾಗರ್ ಅನ್ನು ಆರೋಪಿ ಯಾವ ಜೇಬಿನಲ್ಲಿ ಇಟ್ಟಿದ್ದ ಎಂದು ದೂರಿನಲ್ಲಿ ನಮೂದು ಇಲ್ಲ. ಆರೋಪಿ ನನ್ನೊಂದಿಗೆ *10-15* ನಿಮಿಷ ಮಾತನಾಡಿದ ಬಳಿಕ ತನ್ನ ಡ್ರ್ಯಾಗರ್ ನಿಂದ ಚುಚ್ಚಿದ್ದ. ಆ ಕಾಲಕ್ಕೆ ಆರೋಪಿ ಮೆತ್ತಗೆ ಮಾತನಾಡಿದ್ದ. ನನ್ನ ತಂದೆ ನಾನು ಕೂಗಿದ ಬಳಿಕ ಮನೆಯಿಂದ ಹೊರಗಡೆ ಬಂದಿದ್ದರು. ಆರೋಪಿ ಯಾವ ಕೈಯಿಂದ ಡ್ರ್ಯಾಗರ್ ಅನ್ನು ತೆಗೆದಿದ್ದ ಎಂದು ದೂರಿನಲ್ಲಿ ನಮೂದು ಇಲ್ಲ. ದೂರನ್ನು ನಾನೇ ಬರೆದಿದ್ದೆ. ಆರೋಪಿ ಕೆಳಗಡೆ ಚುಚ್ಚಲು ಅಥವಾ ಮೇಲುಗಡೆ ಯಿಂದ ಚುಚ್ಚಲು ಬಂದಿದ್ದನೋ ಎಂದು ದೂರಿನಲ್ಲಿ ನಮೂದು ಇಲ್ಲ ಎಂದರೆ ನನ್ನ ಎದೆಗೆ ಚುಚ್ಚಲು ಬಂದಿದ್ದ ಎಂದು ನಮೂದು ಇದೆ. ಆರೋಪಿ ಮತ್ತು ನಾನು ಒಂದೇ ಅಳತೆಯ ಎತ್ತರ ಹೊಂದಿದ್ದೇವೆ ಎಂದರೆ ನಿಜ. ನಾನು ಆರೋಪಿಗಿಂತ ಹೆಚ್ಚು ಶಕ್ತಿವಂತನಾಗಿದ್ದೇನೆ ಎಂದರೆ ಸರಿಯಲ್ಲ. ಡ್ರ್ಯಾಗರ್ ಅನ್ನು ತೆಗೆದಾಗ ಕೈ ಹಿಂದಕ್ಕೆ ಹೊಗುತ್ತದೆ ಎಂದರೆ ನಿಜ. ಆ ರೀತಿ ತೆಗೆದಾಗ ಕೈ ಸೊಂಟದಿಂದ ಕೆಳಕ್ಕೆ ಇರುತ್ತದೆ ಎಂದರೆ ನಿಜ. ಆ ರೀತಿ ಕೈ ಸೊಂಟದ ಕೆಳಗೆ ಇದ್ದಾಗ ಮೇಲ್ಭಾಗಕ್ಕೆ ಚುಚ್ಚಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಎದೆ ಭಾಗದಿಂದ ಸೊಂಟದ ಭಾಗ ಅಂದಾಜು *1½* ಅಡಿ ಅಂತರದಲ್ಲಿದೆ ಎಂದರೆ ಇರಬಹುದು. ಆ ದಿನ ರಾತ್ರಿ *8.15* ಕ್ಕೆ ನಾನು ಮನೆಯಿಂದ ಹೊರಗೆ ಬಂದೆ *8.30* ರವರೆಗೆ ಆರೋಪಿ ಜೊತೆ ಮಾತುಕತೆ ನಡೆದಿತ್ತು. ಎದೆಯ ಭಾಗಕ್ಕೆ ಚುಚ್ಚಲು ಡ್ರ್ಯಾಗರ್ ಅನ್ನು ಮುಷ್ಟಿಯಲ್ಲಿ ಹಿಡಿದು ಮೇಲಿನಿಂದ ಚುಚ್ಚಬೇಕು ಎಂದರೆ ನಿಜ. ಕೆಳಭಾಗದಿಂದ ಡ್ರ್ಯಾಗರ್ ಅನ್ನು ತೆಗೆದು ಮೇಲ್ಭಾಗಕ್ಕೆ ಚುಚ್ಚಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಜೋರಾಗಿಯೇ ಚುಚಲು ಬಂದಿದ್ದ. ಆರೋಪಿ ಚುಚ್ಚಿದಾಗ ಆ ಡ್ರ್ಯಾಗರ್ ನನ್ನ ತೋಳಿನ ಬಳಿ ಚುಚ್ಚಿಕೊಂಡಿತ್ತು. ಆ ಕಾಲಕ್ಕೆ ಡ್ರ್ಯಾಗರ್ ಎಷ್ಟು ಇಂಚು ಒಳ ಹೋಗಿತ್ತು ಎಂದು ನಿಖರವಾದ ಅಳತೆ ಗೊತ್ತಿಲ್ಲ. ಆರೋಪಿ ಡ್ರ್ಯಾಗರ್ ನಿಂದ ಚುಚ್ಚಿದಾಗ ನನ್ನ ಎಡ ತೋಳಿಗೆ ಮತ್ತು ಬೆನ್ನಿಗೆ ಎರಡು ಕಡೆ ಗಾಯವಾಗಿತ್ತು. ದೂರಿನಲ್ಲಿ ಎಡ ಭುಜಕ್ಕೆ ಬಿದ್ದು ರಕ್ತ ಗಾಯವಾಗಿದೆ ಎಂದು ನಮೂದಿದೆ ಎಂದರೆ ನಿಜ. ಆ ದಿನ ಆರೋಪಿಯನ್ನು ನಮ್ಮ ಮನೆಯಿಂದ

ದೇವಸ್ಥಾನವರೆಗೆ ಹಿಂಭಾಲಿಸಿಕೊಂಡು ಹೋಗಿದ್ದೆವು. ಆರೋಪಿ ಹಿಡಿದುಕೊಂಡಿದ್ದ ಡ್ರ್ಯಾಗರ್ ನ ಹಿಡಿ ಮರದ್ದು ಇದೆ. ಡ್ರ್ಯಾಗರ್ ಯಾವ ಆಕಾರದ್ದು ಎಂದು ದೂರಿನಲ್ಲಿ ಬರೆದಿಲ್ಲ. ಡ್ರ್ಯಾಗರ್ ನ ಅಳತೆಯನ್ನು ಸಹ ಬರೆದಿಲ್ಲ. ಆ ದಿನ ನಾನು ಕ್ರೀಂ ಬಣ್ಣದ ಟಿ.ಶರ್ಟ್ ಹಾಕಿಕೊಂಡಿದ್ದೆ. ಘಟನೆಗಿಂತ ಮೊದಲು ಆ ಟಿ.ಶರ್ಟ್ ಹರಿದಿರಲಿಲ್ಲ. ಟಿ.ಶರ್ಟ್ ನ ಬಣ್ಣದ ಬಗ್ಗೆ ದೂರಿನಲ್ಲಿ ಬರೆದಿದ್ದೇನೆ. ಈಗ ನಾನು ದೂರನ್ನು ನೋಡುತ್ತಿದ್ದು ಅದರಲ್ಲಿ ಆ ಬಗ್ಗೆ ನಮೂದು ಇಲ್ಲ. ಆರೋಪಿ ಯಾವ ಬಟ್ಟೆ ಧರಿಸಿದ್ದ ಎಂದು ದೂರಿನಲ್ಲಿ ನಮೂದಿಲ್ಲ ಎಂದರೆ ನಿಜ. ಆರೋಪಿ ಘಟನೆ ಸ್ಥಳದಿಂದ ಓಡಿ ಹೋದ ಕೂಡಲೇ ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದರು. ಆ ದಿನ ಪುನಃ ನಾನು ನನ್ನ ಮನೆಗೆ ಹೋಗಿಲ್ಲ. ಆ ದಿನ ಅಮೃತ್, ದೊರೆಸ್ವಾಮಿ ಟೀ ಅಂಗಡಿ ಬಳಿ ಇದ್ದರು ಆದರೆ ಘಟನೆಗಿಂತ ಮೊದಲು ನಾನು ಅವರನ್ನು ನೋಡಿರಲಿಲ್ಲ. ಆ ದಿನ ನಾನು, ನನ್ನ ತಂದೆ ಮತ್ತು ಇನ್ನಿಬ್ಬರು ಆರೋಪಿಯನ್ನು ಹಿಡಿಯಲು ಪ್ರಯತ್ನ ಮಾಡಿದ್ದೆವು. ಕುಂಬಾರಕೊಪ್ಪಲು ಭಾಗದಲ್ಲಿ ಯಾವಾಗಲೂ ಜನ ಓಡಾಡುತ್ತಾರೆ ಎಂದರೆ ಸರಿಯಲ್ಲ. ಘಟನೆ ಕಾಲಕ್ಕೆ ***30-40*** ಜನ ಸೇರಿಲ್ಲ. ಆಸ್ಪತ್ರೆಗೆ ಹೋದಾಗ ರಾತ್ರಿ ***9.30*** ರಿಂದ ***10*** ಗಂಟೆ ಆಗಿರಬಹುದು. ಆಸ್ಪತ್ರೆಗೆ ನನ್ನೊಂದಿಗೆ ನನ್ನ ಅಣ್ಣ ಮತ್ತು ಆತನ ಸ್ನೇಹಿತರು ಬಂದಿದ್ದರು ಆದರೆ ಎಷ್ಟು ಜನ ಬಂದಿದ್ದರು ಎಂದು ನೆನಪಿಲ್ಲ. ದೂರಿನಲ್ಲಿ ನನ್ನ ಅಣ್ಣ ಬಂದಿದ್ದ ಬಗ್ಗೆ ಮಾತ್ರ ನಮೂದು ಇದೆ ಎಂದರೆ ನಿಜ. ಮಹಜರ್ ಗೆ ಬಂದಾಗ ನನ್ನ ತಂದೆ ಅಥವಾ ನನ್ನ ಅಣ್ಣನಿಗೆ ನೋಟಿಸ್ ಕೊಟ್ಟಿರಬಹುದು. ನನಗೆ ಮಹಜರ್ ನ ಹಿಂದಿನ ದಿನ ನೋಟಿಸ್ ಕೊಟ್ಟಿದ್ದರು. ಆ ಕಾಲಕ್ಕೆ ಬೇರೆ ಯಾರಿಗೆ ನೋಟಿಸ್ ಕೊಟ್ಟಿದ್ದರು ಎಂದು ನೆನಪಿಲ್ಲ. ಮಹಜರ್ ಅನ್ನು ನನ್ನ ಮನೆ ಬಳಿ ಬರೆದಿದ್ದರು. ಆ ಕಾಲಕ್ಕೆ ಒಟ್ಟು ***3*** ಜನ ಪೊಲೀಸರು ಬಂದಿದ್ದರು. ಇಬ್ಬರು ಪಂಚನಾಮೆಗೆ ಸಹಿ ಮಾಡಲು ಬಂದಿದ್ದರು. ಅಮೃತ್ ಮತ್ತು ನಂಜುಂಡಸ್ವಾಮಿ ಮಹಜರ್ ಗೆ ಸಹಿ ಮಾಡಿದ್ದರು. ನಿ.ಪಿ-***5, 6*** ಪೊಟೋದಲ್ಲಿ ಒಬ್ಬರೇ ಪೊಲೀಸರು ಇದ್ದಾರೆ ಎಂದರೆ ನಿಜ. ಅಮೃತ್ ಮತ್ತು ನಂಜುಂಡಸ್ವಾಮಿ ಅವರ ಮನೆಗಳು ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿದೆ. ಅಮೃತ್ ಇವರ ಮನೆ ಭೈರವೇಶ್ವರ ನಗರದಲ್ಲಿದೆ. ಮಹಜರ್ ನಲ್ಲಿ ಅಮೃತ್ ಅವರ ವಿಳಾಸ ಹೆಬ್ಬಾಳ್ ಕಾಲೋನಿ ಲಿಂಗಯ್ಯನ ಕೆರೆ

ಹೆಬ್ಬಾಳ್ ಎಂದು ಇದೆ ಎಂದರೆ ನಿಜ. ನಂಜುಂಡಸ್ವಾಮಿ ವಿಳಾಸ ಸುಭಾಷ್ ನಗರ ಹೆಬ್ಬಾಳ್ *1* ನೇ ಹಂತ ಎಂದು ಇದೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಎರಡು ಸ್ಥಳಗಳು ನಮ್ಮ ಮನೆಯ ಹತ್ತಿರದಲ್ಲೇ ಇವೆ. ಘಟನೆ ಕಾಲಕ್ಕೆ ನಾನು ಧರಿಸಿದ್ದ ಟಿ.ಶರ್ಟ್ ಪೂಮಾ ಕಂಪನಿಯದ್ದು ಇತ್ತು. ಪೂಮಾ ಕಂಪನಿಯ ಟಿ.ಶರ್ಟ್ ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ನಿಜ. ಆರೋಪಿಯನ್ನು ಈ ಕೇಸಿನಲ್ಲಿ ಸಿಕ್ಕಿಸುವ ಸಲುವಾಗಿ ಎಂ.ಒ–*1* ಮತ್ತು *2* ಅನ್ನು ಈ ಕೇಸಿನಲ್ಲಿ ಅಳವಡಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಕುಡಿದ ಮತ್ತಿನಲ್ಲಿ ತಂತಿ ಮೇಲೆ ಬಿದ್ದು ಗಾಯಗೊಂಡಿದ್ದನ್ನು ದುರುಪಯೋಗ ಪಡಿಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**